ಅವರ ಅನುಭವದ ಮೇಲೆ ರೇಟ್ ಫಿಕ್ಸ್ ಮಾಡಿ ಕೊಡಲಿ. ನಾವು ಎಲ್ಲಾ ಒಪ್ಪಿಕೊಳ್ಳುತ್ತೇವೆ. ದಯವಿಟ್ಟು ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಹರಿಸಿ ಅಲ್ಲಿಗೆ ಶಿಫಾರಸ್ ಕಳಿಸಬೇಕೆಂದು ನನಗನಿಸುತ್ತದೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಈ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಸದವಕಾಶ ಕೊಟ್ಟಿದ್ದಕ್ಕೆ ತಮಗೆ ಅಭಿನಂದನೆಗಳು. ಪ್ರೈಸ್ ಕಮೀಷನ್‌ರವರಿಗೆ ನಾಲ್ಕು ನಾಲ್ಕು ಎಕರೆ ಜಮೀನು ಕೊಟ್ಟು, ಅವರು ರೇಟ್ ಫಿಕ್ಸ್ ಮಾಡುವ ಬದಲು ಉಳುಮೆ ಮಾಡುವುದಕ್ಕೆ ಜಮೀನನ್ನು ಕೊಡಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಶ್ರೀ ಕೆ. ಎಚ್. ಹನುಮೇಗೌಡ.—ಅವರೇ ಮಾಡಬೇಕು. ಸಂಬಳ ತೆಗೆದುಕೊಂಡು ಉಳುಮೆ ಮಾಡುವುದು ಅಲ್ಲ. ಅವರೇ ಜಮೀನಿನಲ್ಲಿ ಬೆಳೆದು ಖರ್ಚು ಮಾಡಿ ಜೀವನ ಮಾಡಿ ಆ ಮೇಲೆ ರೇಟ್ ಫಿಕ್ಸ್ ಮಾಡಬೇಕು.

ಅಧ್ಯಕ್ಷರು.—ಈ ವರ್ಷ ಆದ ನಂತರ ಈ ಸಭೆಗೆ ಅದರ ಬಗ್ಗೆ ಏನಾಯಿತು ಎಂದು ತಿಳಿಸಿ.

ಶ್ರೀ ಎಸ್. ಬಂಗಾರಪ್ಪ.—ಇದು ಒಂದು ರೀತಿಯಿಂದ ಬಹಳ ಒಳ್ಳೆಯ ಸಲಹೆ. ಇದು ಪರಿಶೀಲಿಸಬೇಕಾದ ಅಂಶವಾಗಿದೆ, ಅದನ್ನು ಅಷ್ಟಕ್ಕೆ ನಿಲ್ಲಿಸೋಣ.

ಅಧ್ಯಕ್ಷರು.—ಪರಿಶೀಲಿಸಿ, ಅರ್ಧ ಗಂಟೆ ಚರ್ಚೆಗೆ ಬರುತ್ತದೆ, ಅದರಲ್ಲಿ ಇದೆಲ್ಲಾ ಬರುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಪ್ರೊಫೆಸರ್ ನಂಜುಂಡಸ್ವಾಮಿ ಅವರು ಇದರ ಬಗ್ಗೆ ಸಪರೇಟ್ ಚರ್ಚೆ ಆಗಬೇಕು ಎಂದು ಹೇಳಿದ್ದಾರೆ. We don't have any objection because that matter is very very important. ಇದರ ಬಗ್ಗೆ ಮತ್ತೊಂದು ಅಭಿಪ್ರಾಯ ಇಲ್ಲ. ಚರ್ಚೆಗೆ ಸರ್ಕಾರದಿಂದ ಉತ್ತರ ಕೊಡುವುದಕ್ಕೆ ಸಿದ್ಧನಾಗಿದ್ದೇನೆ.

ಪ್ರಶ್ನೆ ಸಂಖ್ಯೆ: ೧೦೧ (ಳಖ೨) (ಸದಸ್ಯರು ಗೈರು ಹಾಜರಿ)

ಪ್ರಶ್ನೆ ಸಂಖ್ಯೆ: ೧೦೨ (ಳಖ೮) (ಸದಸ್ಯರು ಗೈರು ಹಾಜರಿ)

ಪ್ರಶ್ನೆ ಸಂಖ್ಯೆ: ೧೦೩ (ಳಖ೧೧) (ಸದಸ್ಯರು ಗೈರು ಹಾಜರಿ)

ಅಫಜಲ್‌ಪುರಕ್ಕೆ ಪದವಿ ಮಹಾವಿದ್ಯಾಲಯ

೩೯. ಶ್ರೀ ಮಾಲೀಕಯ್ಯ ಎ. ಗುತ್ತೇದಾರ್ (ಅಫಜಲ್‌ಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅಫಜಲ್‌ಪುರದಲ್ಲಿ ಡಿಗ್ರಿ ಕಾಲೇಜು ಪ್ರಾರಂಭವಾಗಿದ್ದು ಕಟ್ಟಡ ಇಲ್ಲದೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ತೊಂದರೆಯನ್ನು ನಿವಾರಿಸಲು ಹಾಗೂ ಕಟ್ಟಡ ಕಟ್ಟಲು ಸರ್ಕಾರದವರು ತೆಗೆದುಕೊಳ್ಳಲಿರುವ ಕ್ರಮಗಳೇನು ?

ಶ್ರೀ ಕೆ. ಹೆಚ್. ರಂಗನಾಥ (ಶಿಕ್ಷಣ ಮಂತ್ರಿಗಳು).—

ಅ) ಬಂದಿದೆ.

ಆ) ಕಾಲೇಜಿನ ಕಟ್ಟಡ ನಿರ್ಮಿಸಲು ನಿವೇಶನ ಇನ್ನೂ ದೊರಕಿಸಿಕೊಳ್ಳಬೇಕಾಗಿದೆ. ಗುಲ್ಬರ್ಗಾ ಜಿಲ್ಲಾಧಿಕಾರಿಗಳನ್ನು ಈ ಕಾಲೇಜಿಗೆ ಬೇಕಾದ ನಿವೇಶನವನ್ನು ಒದಗಿಸಲು ಕೋರಲಾಗಿದೆ. ನಿವೇಶನ ಹೊಂದಿದನಂತರ ಹಣದ ಲಭ್ಯತೆಗನುಗುಣವಾಗಿ ಕಾಲೇಜು ಕಟ್ಟಡ ಕಟ್ಟಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

(ಶ್ರೀ ಬಿ. ಸ್ವಾಮಿರಾವ್ ಅವರು ಮಾನ್ಯ ಮಾಲೀಕಯ್ಯ ಗುತ್ತೇದಾರ್ ಅವರ ಪರವಾಗಿ ಪ್ರಶ್ನೆಯನ್ನು ಕೇಳಿದರು).

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ, ಈ ಕಾಲೇಜಿನ ಕಟ್ಟಡ ಯಾವಾಗ ಆಗುತ್ತದೆ, ಮತ್ತು ಈಗಾಗಲೇ ಅಲ್ಲಿ ತೊಂದರೆ ಆಗಿರುವುದು ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಸಚಿವರು).—ಈ ಕಾಲೇಜು ಸ್ಯಾಂಕ್ಷನ್ ಆಗಿದ್ದು ಮೊನ್ನೆ. ೧೯೮೯-೯೦ನೇ ಸಾಲಿಗೆ ಪ್ರಥಮ ದರ್ಜೆ ಕಾಲೇಜು ಪ್ರಾರಂಭ ಆಗಿದೆ. ಅಲ್ಲಿ ಸರ್ಕಾರದ ಜಾಗ ಇಲ್ಲ. ಅಕ್ವೈರ್ ಮಾಡಬೇಕು ಎಂಬ ವಿಚಾರ ಇರುವುದರಿಂದ ಸ್ವಲ್ಪ ಅಕ್ವಿಸಿಷನ್ ಎಲ್ಲ ಆಗಬೇಕಾದರೆ ತಡ ಆಗುತ್ತೆದೆ.

ತುಮಕೂರಿನಲ್ಲಿ ಮೀನು ಮಾರುಕಟ್ಟೆ

೩೪೯. ಶ್ರೀ ಎಸ್. ಶಫಿ ಅಹ್ಮದ್ (ತುಮಕೂರು).—ಮಾನ್ಯ ಬಂದರು ಹಾಗೂ ಮೀನುಗಾರಿಕೆ, ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಮಕೂರಿನಲ್ಲಿ ಮೀನು ಮಾರುಕಟ್ಟೆ ನಿರ್ಮಿಸುವ ಪ್ರಸ್ತಾಪವಿದೆಯೇ ;

ಆ) ಹಾಗಿದ್ದಲ್ಲಿ ಇದು ಯಾವ ಹಂತದಲ್ಲಿದೆ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಮೀನುಗಾರಿಕೆ, ಬಂದರುಗಳು, ವಸತಿ ಮತ್ತು ನಗರಾಭಿವೃದ್ಧಿ ಸಚಿವರು)—

ಅ) ಹೌದು. ತುಮಕೂರಿನ ನಗರಸಭಾ ಪರಿಷತ್ ವತಿಯಿಂದ ಅಲ್ಲಿನ ಸಂತೆ ಮೈದಾನದಲ್ಲಿ ಮೀನು ಮಾರುಕಟ್ಟೆ ಕಟ್ಟುವ ಪ್ರಸ್ತಾಪವಿರುತ್ತದೆ.

ಆ) ತುಮಕೂರಿನಲ್ಲಿ ಮೀನು ಮಾರುಕಟ್ಟೆ ನಿರ್ಮಾಣಕ್ಕಾಗಿ ಮೀನುಗಾರಿಕೆ ಇಲಾಖೆ ವತಿಯಿಂದ ಸಾಲ ಮತ್ತು ಸಹಾಯಧನ ಯೋಜನೆಯಲ್ಲಿ ಒಟ್ಟು ರೂ. ೪೯,೮೦೦-೦೦ ಗಳನ್ನು ಮಂಜೂರು ಮಾಡಿ ಅದರಲ್ಲಿ ಮೊದಲನೇ ಕಂತು ರೂ. ೧೨,೪೫೦-೦೦ಗಳನ್ನು ಬಿಡುಗಡೆ ಮಾಡಲಾಗಿದೆ. ನಿರ್ಮಾಣ ಕಾರ್ಯ ಪ್ರಾರಂಭವಾಗಿರುವುದಿಲ್ಲ

ಶ್ರೀ ಎಸ್. ಷಫಿ ಅಹಮ್ಮದ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ೪೯,೮೦೦-೦೦ ರೂಪಾಯಿಗಳನ್ನು ಈ ಮಾರ್ಕೆಟ್‌ಗೋಸ್ಕರ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಆದರೆ ಈ ಹಣವನ್ನು ಯಾವಾಗ ಕೊಟ್ಟಿದ್ದೀರಿ, ಯಾವರೀತಿ ಡಿಲೇ ಆಗಿದೆ, ಮತ್ತೆ ಸೈಟ್ ಸೆಲಾ ಅಲಾಟ್ ಮಾಡಿದ್ದೀರಾ ಎಂದು ಹೇಳಬೇಕು.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಏನು ಉಪಪ್ರಶ್ನೆಯನ್ನು ಕೇಳಿದ್ದಾರೆ ಅದಕ್ಕೆ ಉತ್ತರ ಹೇಳಬೇಕೆಂದರೆ ೧೯೮೫-೮೬ನೇ ಸಾಲಿನಲ್ಲಿ ಅಲ್ಲಿ ಇಂತಹ ಒಂದು ಮೀನು ಮಾರುಕಟ್ಟೆಯ ವ್ಯವಸ್ಥೆಗಾಗಿ ನಮ್ಮ ಮೀನುಗಾರಿಕಾ ಇಲಾಖೆ ಅಲ್ಲಿನ ಪುರಸಭೆಯವರಿಗೆ ಲೀಸ್ ಕಂ ಸಬ್ಸಿಡಿ ಆಧಾರದ ಮೇಲೆ ಸುಮಾರು ೪೮ ಸಾವಿರ ರೂಪಾಯಿಗಳ ಯೋಜನೆಯನ್ನು ಮಂಜೂರು ಮಾಡಿ ಈಗಾಗಲೇ ೧೨,೪೫೦-೦೦ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ ಆದರೆ ಯಾವ ಸ್ಥಳದಲ್ಲಿ ಮೀನು ಮಾರುಕಟ್ಟೆಯನ್ನು ಕಟ್ಟಬೇಕು ಎಂದು ಹೊರಟಾಗ, ಅಲ್ಲಿ ಸಾರ್ವಜನಿಕರಿಂದ ತೀವ್ರ ಪ್ರತಿಭಟನೆ ಬಂದಿದ್ದರಿಂದ ಆ ಕೆಲಸ ಸ್ಥಗಿತಗೊಂಡಿದೆ, ನಂತರ ಅದು ಮುಂದುವರಿದಿಲ್ಲ. ಬಹುಶಃ ಇದು ಸರಿಯಾದುದಲ್ಲ ಎಂದು ನನಗೂ ಕೂಡ ಮನವರಿಕೆಯಾಗಿದೆ. ಮಾನ್ಯ ಸದಸ್ಯರೊಡನೆ ನಾನು ಸಮಾಲೋಚನೆ ಮಾಡಿ ಆ ಮೀನು ಮಾರುಕಟ್ಟೆಯನ್ನು ಕಟ್ಟಬೇಕು ಎಂದು ಏನು ಇದೆಯೋ ಅದನ್ನು ಸಾರ್ವಜನಿಕರ ಇಚ್ಛೆಗೆ ತಕ್ಕಂತೆ ಸರಿಯಾದ ಸ್ಥಳದಲ್ಲಿ ಕಟ್ಟಿ ಆ ಮೀನು ಮಾರುಕಟ್ಟೆಯಿಂದ ಜನಗಳಿಗೆ ಸುಲಭವಾಗಿ ಮೀನು ಸಿಕ್ಕುವ ರೀತಿಯಲ್ಲಿ ನಾನು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇನೆ.

ಕರ್ನಾಟಕ ಆಗ್ರೋ ಪ್ರೋಟೀನ್ಸ್ ಲಿಮಿಟೆಡ್

೩೫೦. ಶ್ರೀ ರಾಮಲಿಂಗರೆಡ್ಡಿ (ಜಯನಗರ).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಆಗ್ರೋ ಪ್ರೋಟೀನ್ಸ್ ಲಿಮಿಟೆಡ್‌ನ್ನು ಕರ್ನಾಟಕ ಸಹಕಾರಿ ಎಣ್ಣೆ ಬೀಜಗಳ ಮಹಾ ಮಂಡಳಿಗೆ ವಹಿಸಿಕೊಡಲಾಗಿದೆಯೇ ;

ಆ) ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು ;